ಭಾಷಾ ವಿಜ್ಞಾನಕ್ಕೆ ಬುನಾದಿ

ಮಹೇಶ್ ಬಿ.*

DOI: https://doi.org/10.5281/zenodo.24337893

ABSTRACT

ಭಾಷೆ ಎಂಬುದು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಅಂತಹ ಭಾಷೆಯ ಬಗೆಗೆ ಮೂಲಭೂತವಾಗಿ ಅಧ್ಯಯನ ಮಾಡುವ ವಿಧಾನಗಳನ್ನು ಕುರಿತು ಎಂ. ಚಿದಾನಂದಮೂರ್ತಿಯವರ 'ಭಾಷಾ ವಿಜ್ಞಾನದ ಮೂಲತತ್ವಗಳು' ಸವಿವರವಾಗಿ ವಿವರಿಸುವ ಪ್ರಯತ್ನ ಇಲ್ಲಿ ಗಮನಾರ್ಹ. ಇದು ಕನ್ನಡ ಭಾಷಾ ಚರಿತ್ರೆಯಲ್ಲಿ ಮೊದಲ ಪ್ರಯತ್ನವಾಗಿದೆ. ಭಾಷೆ ಮತ್ತು ಬರಹದ ಕುರಿತ ವಿವರಗಳು ಅಡಕವಾಗಿವೆ. ಧ್ವನಿವ್ಯತ್ಯಾಸ, ಅರ್ಥವ್ಯತ್ಯಾಸ, ಭಾಷಾವರ್ಗೀಕರಣದ ಕುರಿತ ಹಲವಾರು ಸ್ಪಷ್ಟತೆಗಳನ್ನು ಉದಾಹರಣೆಯ ಸಹಿತ ವಿವರಿಸಲಾಗಿದೆ. 'ಭಾಷಾ ವಿಜ್ಞಾನದ ಮೂಲತತ್ವಗಳು' ಹೊತ್ತಿಗೆಯೂ ಕನ್ನಡ ಭಾಷಾ ವಿಜ್ಞಾನ ಕ್ಷೇತ್ರದ ಮಹತ್ವವನ್ನು ಸಂಶೋಧನಾ ದೃಷ ್ಟಿಯಿಂದ ಅಧ್ಯಯನ ಮಾಡುತ್ತದೆ.

KEYWORDS: ಭಾಷಾ ವಿಜ್ಞಾನ, ತೀ.ನಂ.ಶ್ರೀ., ಚಿದಾನಂದಮೂರ್ತಿ, ಭಾಷಾಸ್ವೀಕರಣ, ಧ್ವನಿವ್ಯತ್ಯಾಸ, ಅರ್ಥವ್ಯತ್ಯಾಸ.

* **ಡಾ. ಮಹೇಶ್ ಬಿ.,** ಅಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಭಾಷಾ ವಿಜ್ಞಾನವನ್ನು ಹೊಸದಾಗಿ ತಿಳಿಯಲು ಇಚ್ಛಿಸುವವರಿಗೆ ಇದೊಂದು ಪ್ರವೇಶಿಕೆ ಇದ್ದಂತೆ. ಇಂತಹ ಪ್ರಯತ್ನವು ಕನ್ನಡದಲ್ಲಿ ಇದೇ ಮೊದಲನೆಯದಾಗಿರುವುದರಿಂದ ಈ ನನ್ನ ಪುಸ್ತಕವು ಕನ್ನಡದ ಒಂದು ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸುವುದೆಂದು ಚಿದಾನಂದಮೂರ್ತಿಯವರು ನಂಬಿರುವಂತೆಯೇ ಭಾಷಾ ವಿಜ್ಞಾನಕ್ಕೆ ಇದೊಂದು ಪ್ರವೇಶಿಕೆಯಾಗಿದೆ. ಇದು 153 ಪುಟಗಳ ಕಿರು ಕೃತಿಯಾದರೂ ಒಂದು ಬೃಹತ್ ಗ್ರಂಥಕ್ಕೆ ಸಮಾನ ಆಗಬಲ್ಲ ಭಾಷೆಯ ಸತ್ವವನ್ನು ಪಡೆದುಕೊಂಡಿದೆ. ಚಿದಾನಂದಮೂರ್ತಿಯವರಿಗೆ ಭಾಷಾ ವಿಜ್ಞಾನದಲ್ಲಿ ಆಸಕ್ತಿ ಹುಟ್ಟಿಸಿದ್ದು 1955ರ ಬೇಸಿಗೆಯಲ್ಲಿ ಪುಣೆಯಲ್ಲಿ ನಡೆದ 'ಭಾಷಾವಿಜ್ಞಾನದ ಬೇಸಿಗೆಯ ಶಾಲೆ' ಮತ್ತು ಮೈಸೂರು ಕೊಯಮತ್ತೂರು ನಾನಾ ಕಡೆಗಳಲ್ಲಿ ನಡೆದ ಬೇಸಿಗೆಯ ಶಾಲೆಗಳಲ್ಲಿ ಭಾರತ, ಅಮೆರಿಕ ಮತ್ತು ಇಂಗ್ಲೆಂಡಿನ ಶ್ರೇಷ್ಠ ವಿದ್ವಾಂಸರು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ನೀಡಿದ ಉಪನ್ಯಾಸಗಳು ಪ್ರೇರಣೆಯಾದವು. ಇಷ್ಟೇ ಅಲ್ಲದೆ ಕೊಯಮತ್ತೂರಿನಲ್ಲಿ ಡಾ. ಎಮಿನೊ ಅವರು ದ್ರಾವಿಡ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದಂತೆ ನೀಡಿದ ಉಪನ್ಯಾಸ ಅವರನ್ನು ಮತ್ತಷ್ಟು ಈ ಕ್ಷೇತ್ರದ ಕಡೆಗೆ ಸೆಳೆಯಿತು ಎಂಬುದಾಗಿ ಅವರು ಹೇಳಿಕೊಂಡಿದ್ದಾರೆ.

ಈ ಕೃತಿಯು ಒಟ್ಟು ಹದಿಮೂರು ಅಧ್ಯಾಯಗಳನ್ನು ಒಳಗೊಂಡಿದ್ದು ಭಾಷೆಯ ಉಗಮ, ಭಾಷೆಯ ಅನಿವಾರ್ಯತೆ, ಭಾಷೆಯ ಇತಿಹಾಸ ಹಾಗೂ ಬರಹ, ಲಿಪಿ, ಭಾಷಾ ವ್ಯತ್ಯಾಸಗಳ ಕುರಿತು ಸುದೀರ್ಘವಾದ ಮಾಹಿತಿಯನ್ನು ತನ್ನ ಒಡಲಲ್ಲಿರಿಸಿಕೊಂಡು ಭಾಷೆಯ ಕುರಿತ ಅಪಾರ ಮಾಹಿತಿಯನ್ನು ನೀಡುತ್ತದೆ. ಈ ಕೃತಿಯು 1965 ರಲ್ಲಿ ಮೊದಲ ಬಾರಿ ಪ್ರಕಟಣೆಯನ್ನು ಪಡೆದಿದ್ದು ಪ್ರಸ್ತುತ ಹದಿಮೂರಕ್ಕೂ ಹೆಚ್ಚು ಮುದ್ರಣಗಳನ್ನು ಪಡೆದುಕೊಂಡಿದೆ ಎಂದಾದರೆ ಈ ಕೃತಿಯ ಮಹತ್ವ ಮತ್ತು ಅದರ ಅನಿವಾರ್ಯತೆಯು ಭಾಷಾ ಕ್ಷೇತ್ರಕ್ಕೆ ಎಷ್ಟರ ಮಟ್ಟಿಗೆ ಇದೆ ಎಂಬುದು ಅರಿವಾಗುತ್ತದೆ. ಈ ಕೃತಿಗೆ ದೇವರಾಜಬಹದ್ದೂರ್ ಪ್ರಶಸ್ತಿಯೂ ಲಭ್ಯವಾಗಿದೆ. ಇದು ಈ ಕೃತಿಯ ಮೆರುಗನ್ನು ಮತ್ತಷ್ಟು ಹೆಚ್ಚಿಸಿದೆ. ಈ ಕೃತಿಯನ್ನು ಚಿದಾನಂದಮೂರ್ತಿ ರವರು ತಮ್ಮ ಸಹಧರ್ಮಿಣಿಯಾದ ಸೌಭಾಗ್ಯವತಿ ವಿಶಾಲಾಕ್ಷಿಯವರಿಗೆ ಅರ್ಪಿಸಿರುವುದು ಸಹ ಒಂದು ವಿಶೇಷವಾಗಿದೆ.

1967–68 ರಲ್ಲಿ ಅಮೆರಿಕದ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದ್ದರಲ್ಲದೆ, ಒಂದು ವರ್ಷ ಅಲ್ಲೇ ಪೋಸ್ಟ್ ಡಾಕ್ಟರೇಟ್ ವಿದ್ಯಾರ್ಥಿಯಾಗಿ ಭಾಷಾ ವಿಜ್ಞಾನದಲ್ಲಿ ಶಿಕ್ಷಣವನ್ನು ಪಡೆದರು. ಬಹುಶಃ ಈ ಕೃತಿಯನ್ನು ತದನಂತರ ಬರೆದಿದ್ದರೆ ಮತ್ತಷ್ಟು ಮಹತ್ವದ ವಿಚಾರಗಳನ್ನು ಈ ಕೃತಿಯು ತನ್ನ ಒಡಲಲ್ಲಿ ತುಂಬಿಕೊಳ್ಳುತ್ತಿತ್ತೋ ಏನೋ? ಈ ಪುಸ್ತಕದಲ್ಲಿ ತನ್ನದು ಎಂದು ಹೇಳಿಕೊಳ್ಳುವಂತಹ ಹೊಸ ವಿಚಾರಗಳೇನು ಇಲ್ಲ, ಹಲವು ಇಂಗ್ಲಿಷ್ ಗ್ರಂಥಗಳನ್ನು, ಲೇಖನಗಳನ್ನು ಓದಿ ಹಲವು ಪ್ರಾಜ್ಞರ ಉಪನ್ಯಾಸಗಳನ್ನು ಕೇಳಿ, ವಿಷಯಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಬರೆದಿದ್ದೇನೆ. ಹಲವು ಗ್ರಂಥ ಕರ್ತರಿಗೂ ಬೇಸಿಗೆಯ

ಶಾಲೆಗಳಲ್ಲಿ ಉಪನ್ಯಾಸ ಮಾಡಿದ ವಿಜ್ಞಾನಿಗಳಿಗೂ ಈ ಕೃತಿ ಋಣಿಯಾಗಿದೆ ಎಂದು ಅವರೇ ಹೇಳಿಕೊಂಡಿದ್ದರೂ, ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಇದೊಂದು ಅಮೂಲ್ಯ ಕೃತಿ ಎಂದೇ ಹೇಳಬಹುದು. ಈ ಪ್ರಬಂಧದಲ್ಲಿ ಮರೆಯದೆ ಉಲ್ಲೇಖಿಸಬೇಕಾದದ್ದು ಚಿದಾನಂದಮೂರ್ತಿಯವರ ಬಹುಮುಖ ಪ್ರತಿಭೆ ಹಾಗೂ ಬಹುಶ್ರುತತ್ವ. ಏಕಕಾಲದಲ್ಲಿಯೇ ತನ್ನ ಸಂಶೋಧನೆ ಹಾಗೂ ಭಾಷಾ ವಿಜ್ಞಾನದ ಕುರಿತು ಆಸಕ್ತಿ ಹೊಂದಿದ್ದವರು ಚಿದಾನಂದಮೂರ್ತಿಯವರು. ಕರ್ನಾಟಕದಲ್ಲಿ ಭಾಷಾ ವಿಜ್ಞಾನ ಅಧ್ಯಯನಕ್ಕೆ ಬುನಾದಿಯನ್ನು ಹಾಕಿದ ಕೀರ್ತಿ ತೀ.ನಂ.ಶ್ರೀಕಂಠಯ್ಯನವರಿಗೆ ಸಲ್ಲುತ್ತದೆ. ಆದರೆ ಅವರ ಬರಹಗಳಿಂದ ವಂಚಿತವಾದ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿದವರು ಅವರ ಶಿಷ್ಯರಲ್ಲಿ ಒಬ್ಬರಾದ ಚಿದಾನಂದಮೂರ್ತಿಯವರು. ಇಲ್ಲಿರುವ ಅಧ್ಯಯನಗಳನ್ನು ಮುಖ್ಯವಾಗಿ ಮೂರು ವಿಭಾಗಗಳನ್ನಾಗಿ ಮಾಡಿಕೊಳ್ಳಬಹುದು.

ಭಾಷೆಯ ಕುರಿತು:

ಭಾಷೆ ಎಂಬುದು ನೈಸರ್ಗಿಕ ಕ್ರಿಯೆಯಲ್ಲ, ಅದು ಕಲಿತ ಕ್ರಿಯೆ ಎಂದು ಹೇಳುವುದರ ಮೂಲಕ ಭಾಷೆಯ ಉಗಮ, ಲಿಪಿಯ ಉಗಮದ ಬಗ್ಗೆ ಇದ್ದ ಗೊಂದಲಗಳನ್ನು ಇಲ್ಲಿ ಕೆಲವೊಂದು ಪುರಾವೆಗಳ ಮೂಲಕ ನಿರೂಪಿಸಲು ನೆರವು ನೀಡಿದ್ದಾರೆ. ಭಾಷಾ ಕಲಿಕೆಯ ಸಂದರ್ಭದಲ್ಲಿ ಉಂಟಾಗುವ ಅಡಚಣೆಗಳನ್ನು ತಿದ್ದುವ ಭಾಷಾ ವ್ಯವಸ್ಥೆಯ ಸೃಷ್ಟಿಯ ಕುರಿತು ಭಾಷೆಯೆಂದರೇನು? ಎಂಬ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಆಂಗಿಕವಾದ ಸಂಜ್ಞೆಗಳ ಮೂಲಕ ಎಲ್ಲವನ್ನೂ ಹೇಳಲು/ಅಭಿವ್ಯಕ್ತಿ ಪಡಿಸಲು ಸಾಧ್ಯವಿಲ್ಲ ಅಂತಹ ಸಂದರ್ಭದಲ್ಲಿ ಮೌಖಿಕ ಭಾಷೆಯ ಅನಿವಾರ್ಯತೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಆಸೆ ಕುರಿತು ಬ್ಲೂಮ್‌ಫೀಲ್ಡ್‌ನ ಜಾಕ್ ಮತ್ತು ಜಿಲ್ ಅವರ ಸಣ್ಣ ಕತೆಯನ್ನು ಹೇಳುವುದರ ಮೂಲಕ ಪ್ರಚೋದನೆ(S) ಮತ್ತು ಪ್ರತಿಕ್ರಿಯೆಯ(R) ಸಂಬಂಧವು ಮೌಖಿಕವಾಗಿ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿಯಬಹುದು. ಹಲವಾರು ಭಾಷಾ ವಿಜ್ಞಾನಿಗಳ ವ್ಯಾಖ್ಯಾನಗಳನ್ನು ನೀಡುವುದರ ಮೂಲಕ ಯಾದೃಚ್ಛಿಕ ಎಂದರೆ ಇಚ್ಛೆಯನ್ನು ಅವಲಂಬಿಸಿರುವುದು ಎಂದರ್ಥವಿದೆ. ಅಂದರೆ ಪದಕ್ಕೂ ಅರ್ಥಕ್ಕೂ ಇರುವ ಸಂಬಂಧ ಬಹುಮಟ್ಟಿಗೆ ರೂಢಿಯನ್ನು ಅವಲಂಬಿಸಿದೆ ಭಾಷೆಯಲ್ಲಿ ನಡೆಯುವ ವ್ಯತ್ಯಾಸಗಳನ್ನು ತಡೆಯುವ ಗೋಜಿಗೆ ಆಧುನಿಕ ಭಾಷಾ ವಿಜ್ಞಾನಿಗಳು ಹೋಗಲಿಲ್ಲ. ಬಹುಮಟ್ಟಿಗೆ ಅವರು ಯಾದೃಚ್ಛಿಕತೆಯನ್ನೆ ನೆಚ್ಚಿದವರಾಗಿದ್ದಾರೆ. ಕಾರಣ ಪ್ರಾಚೀನ ವೈಯಾಕರಣಿಗಳು ಈ ಭಾಷೆಗೆ ನಿಯಮಗಳನ್ನು ಹಾಕಲು ಹೋಗಿ ಬಹುಮಟ್ಟಿಗೆ ಸೋತಿರುವ ವಿಚಾರಗಳನ್ನು ಅಧ್ಯಯನದಲ್ಲಿ ತಿಳಿಸಿಕೊಟ್ಟಿದ್ದಾರೆ.

ಇತ್ತೀಚೆಗೆ ಉದಯ ಕಂಡಂತಹ ಭಾಷಾ ವಿಜ್ಞಾನದ ದೊಡ್ಡ ಗ್ರಂಥಗಳಲ್ಲಿ ಭಾಷೆಯ ಉಗಮದ ಬಗ್ಗೆ ವಿಚಾರಗಳೇ ಇಲ್ಲದಿರುವುದನ್ನು ಕಾಣಬಹುದು, ಇದ್ದರೂ ಅದು ಕೆಲವು ಮಾತುಗಳಿಗೆ ಸೀಮಿತವಾಗಿದೆ ಎಂದು ಪ್ರಾರಂಭವಾಗುವ ಭಾಷೆಯ ಉಗಮ ಅಧ್ಯಯನವು ಭಾಷೆಯ ಉಗಮದ ಬಗ್ಗೆ, ಚಿಂತನೆಯಲ್ಲಿ ಭಾಷಾ

ವಿಜ್ಞಾನಿಗಳ ಪರ–ವಿರೋಧ ಚರ್ಚೆಯ ಕುರಿತು ಕಾಣಬಹುದು. ಕ್ರಿಸ್ತಶಕ 1866ರಲ್ಲಿ ಸ್ಥಾಪಿತವಾದ ಫ್ರಾನ್ಸಿನ ಭಾಷಾ ಪರಿಷತ್ ತನ್ನ ಸಭೆಯಲ್ಲಿ ಭಾಷೆಯ ಉಗಮವನ್ನು ಕುರಿತು ಪ್ರಬಂಧಗಳನ್ನು ಓದಬಾರದು ಎಂದು ವಿಧಿಯನ್ನು ಕಲ್ಪಿಸಿಕೊಂಡಿದ್ದು ಒಂದು ರೀತಿಯ ಅಪಖ್ಯಾತಿ ಬಂದಂತೆ ಕಾಣುತ್ತದೆ. ಅಂದರೆ ಭಾಷೆಯ ಉಗಮದ ಬಗ್ಗೆ ಇರುವ ಗೊಂದಲಗಳನ್ನು ಇಲ್ಲಿ ಕಾಣಬಹುದು. ಹೆರೊಡೊಟಸ್ ಹೇಳುವ ರಾಜನ ಕಥೆ, ಋಗ್ವೇದದಲ್ಲಿ ಬರುವ ಕಥೆ, ಬೈಬಲ್‌ನ ಜೆನೆಸಿಸ್ ಭಾಗದಲ್ಲಿ ಉಲ್ಲೇಖಿತವಾಗಿರುವ ಕಥೆಗಳನ್ನು ಭಾಷಾ ಉಗಮದ ಹಿನ್ನೆಲೆಯಲ್ಲಿ ಕಾಣಬಹುದು. ಭಾಷಾ ಉಗಮದ ಕುರಿತು ಇರುವ ವಾದಗಳು ಚರ್ಚೆಗಳು ಇಲ್ಲಿವೆ. ಈ ಎಲ್ಲ ವಾದಗಳನ್ನು ವಿಮರ್ಶಿಸಿದ ಯೆಸ್ಪರ್ಸನ್ ಭಾಷೆಯ ಶೈಶವಾವಸ್ಥೆಯನ್ನು ತಿಳಿಯಲು ಮೂರು ಮಾರ್ಗಗಳಿವೆ ಎಂಬ ತೀರ್ಮಾನಕ್ಕೆ ಬರುತ್ತಾನೆ. ಮಕ್ಕಳ ಭಾಷೆ, ಪ್ರಾಚೀನ ಜನಾಂಗಗಳ ಭಾಷೆ, ಭಾಷೆಯ ಚರಿತ್ರೆಯ ಮಾರ್ಗಗಳ ವಿವರಣೆ ಇಲ್ಲಿದೆ. ಕೊನೆಯಲ್ಲಿ ಭಾಷಾ ಉಗಮದ ಪ್ರಶ್ನೆ ಶಾಂತವಾಗಿದ್ದರೂ ಮತ್ತೆ ಅದು ಕುತೂಹಲಿಗಳ ಮನಸ್ಸನ್ನು ಕೆಣಕದೆ ಬಿಡುವುದಿಲ್ಲ ಎಂಬ ಅಭಿಪ್ರಾಯಕ್ಕೆ ಚಿದಾನಂದಮೂರ್ತಿ ಅವರು ಬರುತ್ತಾರೆ.

ಭಾಷೆಯ ಸಂಖ್ಯೆ, ನಾಶವಾದ ಭಾಷೆಗಳು, ಭಾಷೆಗಳ ನಾವೀನ್ಯತೆ, ಅನ್ಯಭಾಷೆ ಸ್ವೀಕರಣ ಕುರಿತ ವಿಚಾರಗಳ ಚರ್ಚೆಯನ್ನು ಭಾಷಾವರ್ಗೀಕರಣ ಎಂಬ ಅಧ್ಯಯನದಲ್ಲಿ ಕಾಣಬಹುದು. ಅನ್ಯ ಭಾಷೆಯಿಂದ ಸ್ವೀಕರಣವಾದ ಭಾಷೆಯ ಪದಗಳನ್ನು ಯಾವ ಭಾಷೆಯ ವರ್ಗಕ್ಕೆ ಸೇರಿಸಬೇಕು ಎಂಬುದು ಸಂದಿಗ್ಧ ಪ್ರಶ್ನೆಯಾಗಿದೆ. ಆದರೂ ಸಹ ಈ ಎಲ್ಲ ಪ್ರಾಚೀನ ಅರ್ವಾಚೀನ ಭಾಷೆಗಳನ್ನು ಅಧ್ಯಯನದ ಸೌಕರ್ಯಕ್ಕಾಗಿ ಕೆಲವು ವರ್ಗಗಳಾಗಿ ವಿಂಗಡಿಸಿರುವುದು ಅನಿವಾರ್ಯವೂ ಆಗಿದೆ. ಭಾಷಾ ವಿಜ್ಞಾನಿಗಳು ಭಾಷೆಯನ್ನು ವರ್ಗೀಕರಿಸಲು ಅನೇಕ ರೀತಿಯ ಪ್ರಯತ್ನಗಳನ್ನು ಮಾಡಿದ್ದಾರೆ. ಅದರಲ್ಲಿ ಬಹುಜನ ಒಪ್ಪಿತವಾದ ಭಾಷಾ ವರ್ಗೀಕರಣದ ಮೂಲತತ್ವಗಳು ಮುಖ್ಯವಾಗಿ ಎರಡು. ರಾಚನಿಕ ವರ್ಗೀಕರಣ–ಪದರಚನೆ ಮತ್ತು ವಾಕ್ಯ ರಚನೆಯ ಆಧಾರದ ಮೇಲೆ ಭಾಷೆಯನ್ನು ವರ್ಗೀಕರಿಸಿದೆ. ವಾಂಶಿಕ ವರ್ಗೀಕರಣ–ಭಾಷಾ ವಂಶಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಪ್ರಸ್ತುತ ಒಂದು ಮೂಲ ಭಾಷೆಯಿಂದ ಹೊರಟ ಭಾಷೆಗಳು ಅವುಗಳಿಂದ ಹೊರಟ ಇತರ ಭಾಷೆಗಳು ಇವುಗಳೆಲ್ಲವನ್ನೂ ಸೇರಿದರೆ ಒಂದು ಭಾಷಾ ವಂಶವೆಂದು ಕರೆಯಬಹುದು. ಈ ಮಹತ್ವದ ತತ್ತ್ವವು ಭಾಷಾ ವರ್ಗೀಕರಣಕ್ಕೆ ಅತ್ಯಂತ ಸಮರ್ಪಕವಾದದ್ದು ಎಂದು ಬ್ಲೂಮ್‌ಫೀಲ್ಡ್ ಹೇಳುತ್ತಾರೆ. ಇಂಡೋ ಯುರೋಪಿಯನ್ ಭಾಷಾ ವರ್ಗ, ಫಿನ್ನೊ–ಉಗ್ರಿಕ್ ಭಾಷಾ ವರ್ಗ, ಅಲ್ಟಾಯಿಕ್ ಭಾಷಾ ವರ್ಗ, ದ್ರಾವಿಡ ಭಾಷಾ ವರ್ಗ ಇವು ಪ್ರಸ್ತುತ ನಾವು ಭಾಷಾ ಅಧ್ಯಯನಕ್ಕಾಗಿ ಅನುಸರಿಸುತ್ತಿರುವ ವರ್ಗಗಳು ಎಂಬುದಾಗಿ ತಿಳಿಯಬಹುದು.

ಮನುಷ್ಯ ಸಂಘ ಜೀವಿ, ತನ್ನ ಅವಶ್ಯಕತೆಗಳಿಗಾಗಿ ಇತರರನ್ನು ಅವಲಂಬಿಸಬೇಕಾಗುತ್ತದೆ. ಹಾಗೆಯೇ ಒಂದು ಸಮಾಜ ಸಂಸ್ಕೃತಿಯ ಜೊತೆಗೆ ಭಾಷೆಯ ಹಲವು ಪದಗಳನ್ನು ಯಥಾವತ್ತಾಗಿ ಸ್ವೀಕರಿಸುವುದು ಎಲ್ಲಾ

ಭಾಷೆಗಳಲ್ಲಿಯೂ ಕಾಣಬಹುದು. ಅಂದರೆ ಯಾವುದೇ ಜೀವಂತ ಭಾಷೆಯು ಇತರ ಭಾಷೆಗಳಿಂದ ಪದವನ್ನಾಗಲಿ ಇತರ ಭಾಷಾಂಶಗಳನ್ನಾಗಲಿ ಸ್ವೀಕರಿಸದಿರಲು ಸಾಧ್ಯವೇ ಇಲ್ಲ. ಇಂತಹ ಸ್ವೀಕರಣವು ನಡೆಯುವುದು ಸಾಂಸ್ಕೃತಿಕ ಪದಕೋಶದಲ್ಲಿ ಮಾತ್ರ ನಿತ್ಯೋಪಯೋಗಿಯಾದ ಪದಗಳನ್ನು ಒಂದು ಭಾಷೆ ಹಾಗೆಯೇ ಉಳಿಸಿಕೊಳ್ಳುತ್ತದೆ. ಬೇರೆ ಭಾಷೆಯಿಂದ ಬಂದ ನಾಮ, ಕ್ರಿಯಾಪದಗಳು ತನ್ನ ಭಾಷೆಯ ಪದಗಳು ಎಂಬಂತೆಯೇ ರೂಪಾಂತರವನ್ನು ಪಡೆದುಕೊಂಡಿರುತ್ತವೆ. ಉದಾಹರಣೆಗೆ ಕಾರು, ರೈಲು ಇತ್ಯಾದಿ. ಈ ರೀತಿಯಾಗಿ ಸಾಂಸ್ಕೃತಿಕ ಸ್ವೀಕರಣ ಮತ್ತು ಉಪಭಾಷಾ ಸ್ವೀಕರಣ ಭಾಷೆಯಲ್ಲಿ ಹೇಗೆ ನಡೆಯುತ್ತದೆ ಎಂಬುದನ್ನು ಭಾಷಾಸ್ವೀಕರಣದಲ್ಲಿ ಕಾಣಬಹುದು. ಭಾಷಾ ಸ್ವೀಕರಣದ ಸಂದರ್ಭದಲ್ಲಿ ಭಾಷೆಯಲ್ಲಿ ಉನ್ನತ ಭಾಷೆಯಿಂದ ತಳವರ್ಗದ ಭಾಷೆ ಅತಿ ಹೆಚ್ಚು ಸ್ವೀಕರಿಸುತ್ತದೆ ಇಲ್ಲಿ ಭಾಷೆಯ ಮೇಲೂ-ಕೀಳುಗಳನ್ನು ಸಹ ಕಾಣಬಹುದು. ಇದೊಂದು ರೀತಿಯ ಏಕ ಪಕ್ಷೀಯ ಭಾಷಾ ಸ್ವೀಕಾರಕ್ಕೆ ಉದಾಹರಣೆಯೂ ಆಗಿದೆ.

ಭಾಷೆಯಲ್ಲಾಗುವ ವ್ಯತ್ಯಾಸಗಳು:

ಮೂಲ ಭಾಷೆ ಅಥವಾ ಮಾತೃ ಭಾಷೆಯೊಂದನ್ನು ಹೊರತುಪಡಿಸಿ ಮತ್ತೆಲ್ಲ ಭಾಷೆಗಳು ಒಂದಲ್ಲ ಒಂದು ವ್ಯತ್ಯಾಸವನ್ನು ಹೊಂದುತ್ತಿರುತ್ತವೆ. ಇದು ಜೀವಂತ ಭಾಷೆಯೊಂದರ ಲಕ್ಷಣವಾಗಿದೆ. ಇದನ್ನು ಭಾಷಾವ್ಯತ್ಯಾಸ ಎಂಬ ಅಧ್ಯಯನದಲ್ಲಿ ವಿವರಿಸಲಾಗಿದೆ. ಇತರ ಕ್ಷೇತ್ರಗಳಂತೆ ಭಾಷಾ ಕ್ಷೇತ್ರದಲ್ಲೂ ಸಹ ಮನುಷ್ಯ ಕ್ಲಿಷ್ಟವಾದದ್ದನ್ನು ಬಿಟ್ಟು ಬಿಡುತ್ತಾನೆ. ಅಥವಾ ಅದನ್ನು ಸುಲಭಕ್ಕೆ ಪರಿವರ್ತಿಸಿಕೊಂಡು ಬಳಸುತ್ತಾನೆ. ಹೀಗೆ ಸೌಲಭ್ಯಾಕಾಂಕ್ಷೆಯೂ ಭಾಷಾ ವ್ಯತ್ಯಾಸದಲ್ಲಿ ಪ್ರಮುಖ ಪಾತ್ರವಹಿಸಿದೆ. ಸೌಲಭ್ಯಾಕಾಂಕ್ಷೆ ಮತ್ತು ಅನ್ಯ ಭಾಷೆಯ ಸಂಸರ್ಗದಿಂದಾಗಿ ಅನಿವಾರ್ಯವಾಗಿ ಭಾಷೆಯೂ ವ್ಯತ್ಯಾಸವನ್ನು ಕಂಡು ಕೊಳ್ಳುತ್ತಿರುತ್ತದೆ. ಅನೇಕ ಪದಗಳ ಅರ್ಥವನ್ನು ಸರಿಯಾಗಿ ಗ್ರಹಿಸದಿದ್ದುದರ ಫಲವಾಗಿ ಭಾಷೆಯಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬಂದಿವೆ. ಉದಾಹರಣೆಗೆ ಅಸುರ = ಪ್ರಾಣಕ್ಕೆ ಒಡೆಯ ಮೂಲತಃ ಆದರೆ ಸುರ ಎಂದು ಬದಲಾಗಿದೆ. ಅಸುರ ಎಂಬ ಪದಕ್ಕೆ ರಾಕ್ಷಸ ಎಂದು ಗ್ರಹಿಸಲಾಗಿದೆ.

ಇಂತಹ ಉದಾಹರಣೆಗಳ ಮೂಲಕ ಭಾಷಾ ವ್ಯತ್ಯಾಸವನ್ನು ಕುರಿತು ಚಿದಾನಂದಮೂರ್ತಿಯವರು ವಿವರಿಸಿದ್ದಾರೆ. ವಯಸ್ಕರಿಗಿಂತ ಯುವಕರಲ್ಲಿ ಈ ಭಾಷಾ ವ್ಯತ್ಯಾಸವನ್ನು ನಾವು ಹೆಚ್ಚಾಗಿ ಕಾಣುತ್ತೇವೆ. ಯುವಕರು ವೈವಿಧ್ಯ ಪ್ರಿಯರಾದ್ದರಿಂದ ವ್ಯತ್ಯಾಸ ಪ್ರಿಯರೂ ಆಗಿದ್ದಾರೆ. ಭಾಷೆಯಲ್ಲಿ ಹೊಸದೇನಾದರೂ ಕಂಡು ಬಂದರೆ ತಕ್ಷಣವೇ ಸ್ವಾಗತಿಸುತ್ತಾರೆ. ಸಾಧ್ಯವಾದರೆ ವ್ಯತ್ಯಾಸಗಳಿಗೆ ತಮ್ಮ ಕಾಣಿಕೆ ಏನಾದರೂ ಇದ್ದರೆ ಸಲ್ಲಿಸುತ್ತಾರೆ ಎಂಬುದು ಚಿದಾನಂದ ಮೂರ್ತಿಯವರ ಭಾಷಾ ವ್ಯತ್ಯಾಸ ಕುರಿತ ಅಭಿಪ್ರಾಯವು ಹೌದು, ಇದು ಸತ್ಯವೂ ಹೌದು.

ಭಾಷೆಯಲ್ಲಿ ನಡೆಯುವ ಧ್ವನಿಗಳಿಗೆ ಸಂಬಂಧಿಸಿದ ವ್ಯತ್ಯಾಸಗಳನ್ನು ಕುರಿತು

ಧ್ವನಿವ್ಯತ್ಯಾಸ ಎಂಬ ಅಧ್ಯಾಯದಲ್ಲಿ ಕಾಣಬಹುದು. ಕಾಲಾಂತರದಲ್ಲಿ ಒಂದು ಜೀವಂತ ಭಾಷೆಯಲ್ಲಿ ಉಂಟಾಗುವ ಅಕ್ಷರಗಳ ಬದಲಾವಣೆಯ ಹಿನ್ನೆಲೆಯಲ್ಲಿ ವಿವಿಧ ಭಾಷೆಗಳಲ್ಲಿ ಉಂಟಾಗಿರುವ ಧ್ವನಿಗಳ ವ್ಯತ್ಯಾಸವನ್ನು ಉದಾಹರಿಸಿದ್ದಾರೆ. ಧ್ವನಿಗಳ ವ್ಯತ್ಯಾಸವಾದರೂ ಅರ್ಥವ್ಯತ್ಯಾಸ ಆಗದಿರುವುದನ್ನು ನಾವಿಲ್ಲಿ ಕಾಣಬಹುದು. ಭಾಷೆಗೆ ಧ್ವನಿ ವಿಚಾರದಲ್ಲಿ ನಿಯಮ ಇರುವುದಿಲ್ಲ ಅದು ರೂಢಿಯಿಂದ ಬಂದದ್ದಾಗಿರುತ್ತದೆ. ಒಂದು ಪ್ರದೇಶದಲ್ಲಿ, ಒಂದು ಕಾಲದಲ್ಲಿ, ಒಬ್ಬ ವ್ಯಕ್ತಿಯ ಒಂದು ಪದದಲ್ಲಿ ಆರಂಭವಾದ ಒಂದು ಧ್ವನಿ ವ್ಯತ್ಯಾಸವೂ ಅದಕ್ಕೆ ಅನುಕೂಲವಾದ ಅವಕಾಶವೂ ಲಭಿಸಿದರೆ ದೇಶದ ತುಂಬಾ ಹಬ್ಬುತ್ತದೆ. ಇತರ ಪದಗಳಲ್ಲಿ ವ್ಯಾಪಿಸುತ್ತದೆ. ಪ್>ಹ್ ಇಲ್ಲಿಯೂ ಅದನ್ನೇ ನೋಡುತ್ತೇವೆ. ಶಾಸನಗಳಿಂದ ಪ್ರಸ್ತುತ ಸಾಹಿತ್ಯದವರೆಗೂ ಧ್ವನಿ ವ್ಯತ್ಯಾಸವಾಗಿರುವುದನ್ನು ಚಿದಾನಂದಮೂರ್ತಿಯವರು ಗುರುತಿಸಿದ್ದಾರೆ. ಧ್ವನಿ ವ್ಯತ್ಯಾಸದ ನಿಯತತೆಯು ತೌಲನಿಕ ಭಾಷಾ ವಿಜ್ಞಾನಕ್ಕೆ ಅಡಿಗಲ್ಲಾಗಿದೆ ಎಂದು ಹೇಳಬಹುದು.

ಅರ್ಥವ್ಯತ್ಯಾಸ ಎಂಬ ಅಧ್ಯಯನದಲ್ಲಿ ಅರ್ಥವ್ಯತ್ಯಾಸ ಕ್ಲಿಷ್ಟವಿಚಾರಗಳನ್ನು ಕುರಿತು ವಿವರಿಸಿದ್ದಾರೆ. ಪದದ ಅರ್ಥವೇನೆಂದರೆ ಎಂಬ ಪ್ರಶ್ನೆ ಮೇಲ್ನೋಟಕ್ಕೆ ಸುಲಭವಾಗಿ ಕಂಡರೆ ಅದರ ವಿವರಣೆ ಅಷ್ಟು ಸರಳವಾಗಿಲ್ಲ. ಬ್ಲೂಮ್‌ಫೀಲ್ಡ್ ಹೇಳುವಂತೆ ಮಾತನಾಡುವವನು ಒಂದು ಪದವನ್ನು ಬಳಸುವ ಸನ್ನಿವೇಶ, ಕೇಳುವವನಲ್ಲಿ ಅದು ಉಂಟುಮಾಡುವ ಪ್ರತಿಕ್ರಿಯೆ ಇವು ಒಂದು ಪದದ ಅರ್ಥವನ್ನು ತಿಳಿಸುತ್ತದೆ. ಒಂದು ಪದವನ್ನು ಒಂದು ಸನ್ನಿವೇಶದಲ್ಲಿ ಬಳಸುತ್ತಿದ್ದು ಅದನ್ನು ಕಾಲಾಂತರದಲ್ಲಿ ಇನ್ನೊಂದು ಸನ್ನಿವೇಶದಲ್ಲಿ ಬಳಸಲಾರಂಭಿಸಿದರೆ ಆ ಪದವು ಅರ್ಥವ್ಯತ್ಯಾಸವನ್ನು ಪಡೆಯಿತು ಎಂದು ಹೇಳುತ್ತೇವೆ. ಉದಾಹರಣೆಗೆ WIFE=ಸ್ತ್ರೀ>ಹೆಂಡತಿ, ಅಮ್ಮ=ಅಪ್ಪ>ತಾಯಿ. ಮುಖ್ಯವಾಗಿ ಅರ್ಥ ವ್ಯತ್ಯಾಸದ ಐದು ಪ್ರಭೇದಗಳಾದ ಅರ್ಥಸಂಕೋಚ, ಅರ್ಥವಿಕಾಸ, ಹೀನಾರ್ಥಪ್ರಾಪ್ತಿ, ಉತ್ತಮಾರ್ಥಪ್ರಾಪ್ತಿ ಮತ್ತು ಅರ್ಥಾಂತರದ ವಿಚಾರಗಳನ್ನು ಸವಿವರವಾಗಿ ಇಲ್ಲಿ ಕಾಣಬಹುದು. ಅಷ್ಟೇ ಅಲ್ಲದೆ ಅರ್ಥ ವ್ಯತ್ಯಾಸಕ್ಕೆ ಪ್ರಮುಖ ಏಳು ರೀತಿಯ ಕಾರಣಗಳನ್ನು ಇಲ್ಲಿ ಗುರುತಿಸಿಕೊಟ್ಟಿದ್ದಾರೆ.

ಒಂದು ಪದವು ಮೂಲ ರೂಪದಲ್ಲಿರುವ ಬೇರೊಂದು ರೂಪವನ್ನು ಪಡೆದು ಕ್ರಮೇಣ ಹೊಸ ರೂಪವೇ ಹೆಚ್ಚು ಹೆಚ್ಚಾಗಿ ಬಳಕೆಗೆ ಬಂದು ಹಳೆಯ ರೂಪವು ಮರೆಯಾದರೆ ಇತರ ರೂಪಗಳ ಸಾಮ್ಯದ ಆಧಾರದ ಮೇಲೆ ಹೊಸ ಪದಗಳು ನಿರ್ಮಾಣಗೊಂಡರೆ ಅದನ್ನು ಸಾಮ್ಯ ಮೂಲ ವ್ಯತ್ಯಾಸ ಎಂದು ಸರಳವಾಗಿ ಸಾಮ್ಯ ಮೂಲ ವ್ಯತ್ಯಾಸ ಎಂಬ ಅಧ್ಯಯನದಲ್ಲಿ ವಿವರಿಸಿದ್ದಾರೆ. ಈ ಪ್ರವೃತ್ತಿ ಮಾನವ ಸಹಜವಾದುದಾದರೂ ಅರಿತೋ ಅರಿಯದೆಯೋ ಬಹುಮಟ್ಟಿಗೆ ಅರಿವಿಲ್ಲದೆಯೇ ಸಾಮ್ಯ ಮೂಲ ಪದಗಳನ್ನು ಬಳಸುತ್ತೇವೆ. ಭಾಷೆಯಲ್ಲಿರುವ ಅನೇಕ ಅಕ್ರಮಗಳನ್ನು ಸಾಮ್ಯ ಮೂಲ ವ್ಯತ್ಯಾಸವೂ ಸಕ್ರಮಗೊಳಿಸುತ್ತದೆ. ಉದಾಹರಣೆಗೆ GO>GOED>WENT, MAN>MANS>MEN, ರೈಲ್>ರೈಲು>ರೈಲನ್ನು

ಸಾಮ್ಯ ಮೂಲ ಅತಿ ಹೆಚ್ಚು ಬಾಲ್ಯದಲ್ಲಿ ನಡೆದರೂ ಜೀವನಪರಿಯಂತ ನಡೆಯುತ್ತಲೇ ಇರುತ್ತದೆ. ಒಟ್ಟಾರೆಯಾಗಿ ಸಾಮ್ಯ ಮೂಲ ವ್ಯತ್ಯಾಸಗಳು ಎಂಬುದು ಜನರಿಗೆ ಅನುಕೂಲಕರವಾದ ರೀತಿಯಲ್ಲಿ ಪದ ಅಥವಾ ಧ್ವನಿಗಳನ್ನು ಬದಲಾಯಿಸಿಕೊಳ್ಳಲು ರೂಢಿ ಗತಗೊಳಿಸಿಕೊಳ್ಳುವ ವಿಚಾರಗಳನ್ನು ಕುರಿತು ಚಿದಾನಂದಮೂರ್ತಿಯವರು ವಿವರವಾಗಿ ಉದಾಹರಣೆಗಳ ಸಹಿತ ಸಾಬೀತುಪಡಿಸಿದ್ದಾರೆ.

ಭಾಷೆ ಮತ್ತು ಬರಹ ಎಂಬ ಅಧ್ಯಯನದಲ್ಲಿ ಭಾಷೆಯ ಉಪಯೋಗವನ್ನು ಕಂಡುಕೊಂಡು ಮನುಷ್ಯ ಮನುಷ್ಯನಾದನು, ಲೇಖನದ ಉಪಯೋಗವನ್ನು ಕಂಡುಕೊಂಡು ಮನುಷ್ಯ ನಾಗರಿಕನಾದ ಎಂಬ ಗೆಲ್ಬ್‌ರವರ ಮಾತು ಭಾಷೆ ಮತ್ತು ಬರಹಕ್ಕೆ ಮುನ್ನುಡಿಯಾಗಿದೆ. ಭಾಷೆ ಮತ್ತು ಬರಹಗಳಿಗಿರುವ ಸಂಬಂಧವೂ ಬಹು ನಿಕಟವಾಗಿದ್ದು ಆದರೂ ನಾವು ಎರಡನ್ನೂ ಪ್ರತ್ಯೇಕಿಸಬೇಕಾಗುತ್ತದೆ. ವಸ್ತುಗಳ ಮೂಲಕ, ಚಿತ್ರಗಳ ಮೂಲಕ ಭಾಷೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದಕ್ಕೆ ಉದಾಹರಣೆ ಸಹಿತ ವಿವರಿಸಿದ್ದಾರೆ. ಲಿಪಿಯ ಉಗಮದ ಕುರಿತು ಮಾತನಾಡುತ್ತಾ ಐದು ಸಾವಿರ ವರ್ಷಗಳ ಹಿಂದಕ್ಕೆ ಕರೆದೊಯ್ಯುತ್ತಾರೆ. ಲಿಪಿಗೂ ಮೊದಲು ಚಿತ್ರಗಳ ಮೂಲಕ ಅಭಿಪ್ರಾಯಗಳನ್ನು ನಿರೂಪಿಸುವ ಘಟ್ಟವೇ ಇತಿಹಾಸದಲ್ಲಿ ಬರಹದ ಮೊದಲ ಘಟ್ಟ. ಚಿತ್ರಲೇಖನ, ಭಾವಲೇಖನ, ಧ್ವನಿಲೇಖನ, ಪದಲೇಖನ, ಅಕ್ಷರ ಲೇಖನ, ವರ್ಣಲೇಖನ ಎಂದು ಭಾಷೆಯು ಬರಹಕ್ಕೆ ಬಂದು ರೂಪಾಂತರಗೊಂಡಿದ್ದನ್ನು ವಿವರಿಸಿದ್ದಾರೆ. ಕನ್ನಡ ಲಿಪಿಯು ಬ್ರಾಹ್ಮಿ ಲಿಪಿಯಿಂದ ನಿಷ್ಪನ್ನವಾಗಿದೆ, ಬ್ರಾಹ್ಮಿ ಲಿಪಿಯು ಸೈಂಧವ ಲಿಪಿಯಿಂದ ಬಂದಿದೆ ಎಂದು ಕೆಲವರು ವಾದ ಮಾಡಿದರೂ ಸೈಂಧವ ಲಿಪಿಯನ್ನು ಇನ್ನೂ ಸ್ಪಷ್ಟವಾಗಿ ಯಾರೂ ಓದಲು ಸಾಧ್ಯವಾಗಿಲ್ಲ. ಅಶೋಕನ ಶಾಸನಗಳಲ್ಲಿ ಬಳಕೆಯಾಗಿರುವ ಔತ್ತರೇಯ ಪ್ರಭೇದ ಮತ್ತು ದಾಕ್ಷಿಣಾತ್ಯ ಪ್ರಭೇದಗಳಲ್ಲಿ ದಾಕ್ಷಿಣಾತ್ಯ ಪ್ರಭೇದದಿಂದ ದಕ್ಷಿಣ ಭಾರತದ ಲಿಪಿಗಳು ಉಗಮಗೊಂಡವು ಎಂಬ ನಿರ್ಧಾರವನ್ನು ಇಲ್ಲಿ ಕಾಣಬಹುದು. ಪ್ರಪಂಚದಲ್ಲಿ ಮೂರು ರೀತಿಯ ವರ್ಣಮಾಲೆಗಳಿವೆ ಎಂಬುದಾಗಿ ಈ ಅಧ್ಯಯನದಲ್ಲಿ ಹೆಸರಿಸಲಾಗಿದೆ.

ಭಾಷಾ ವಿಜ್ಞಾನ:

ಒಂದು ಸಮುದಾಯದ ಭಾಷೆಯನ್ನು ಗಮನಿಸುತ್ತಾ ಹೋದರೆ ಅದು ಹಲವು ವ್ಯಕ್ತಿ ಭಾಷೆಗಳ ಮೊತ್ತವಾಗಿರುತ್ತದೆ. ಒಬ್ಬ ವ್ಯಕ್ತಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಯಾಣ ಹೊರಟ ಸಂದರ್ಭದಲ್ಲಿ ಅವನ ಕಿವಿಗೆ ಬೀಳುವ ಭಾಷೆ ಮತ್ತು ಅವನ ಭಾಷೆ ಒಂದೇ ಆಗಿದ್ದರೂ ಪದಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸಬಹುದು. ಒಂದು ಭಾಷೆಯ ವ್ಯಕ್ತಿ ಭಾಷೆಗಳಲ್ಲಿ ಇರುವುದಕ್ಕಿಂತ ಉಪ ಭಾಷೆಗಳಲ್ಲಿನ ವ್ಯಕ್ತಿ ಭಾಷೆಗಳಲ್ಲಿ ಪರಸ್ಪರ ಅರಿವಿನ ಶೇಕಡ ಪ್ರಮಾಣ ಹೆಚ್ಚಾಗಿರುತ್ತದೆ. ಒಂದು ಭಾಷೆ ಮತ್ತೊಂದು ಭಾಷೆಯೂ ತಾನು ಬಳಸುವ ಪದಗಳ ಆಧಾರದ ಮೇಲೆ ಹೇಳುವ ವಿಷಯ ಒಂದೇ ಇದ್ದರೂ ಅದನ್ನು ಹೇಳುವ ರೀತಿ ಭಿನ್ನವಾಗಿರುವುದು ಧ್ವನಿಗಳು ವಿಸ್ತರಿಸುವುದು ಮತ್ತು ಕುಗ್ಗಿಸುವುದರ ಮೂಲಕ ಕಾಣುತ್ತೇವೆ. ಉಪಭಾಷೆಗಳ

ತಿಕ್ಕಾಟ ಮತ್ತು ಅವುಗಳ ನಡುವಿನ ವ್ಯತ್ಯಾಸಗಳನ್ನು ಇಲ್ಲಿ ಕಾಣಬಹುದು. ಧ್ವನಿ ವಿಜ್ಞಾನ ಧ್ವನಿಗಳು ಉತ್ಪತ್ತಿ ಮತ್ತು ಇತ್ಯಾದಿ ವಿಚಾರಗಳನ್ನು ಹೇಳಿಕೊಂಡಿದ್ದಾರೆ. ಈ ಅಧ್ಯಾಯದಲ್ಲಿ ತೀ.ನಂ.ಶ್ರೀಕಂಠಯ್ಯನವರ ಭಾಷಾ ವಿಜ್ಞಾನದ ಕುರಿತ ವಿಚಾರಗಳು ಹೆಚ್ಚಾಗಿ ಕಂಡುಬರುತ್ತವೆ. ಮನುಷ್ಯನು ಧ್ವನಿಗಳನ್ನು ಹೊರಡಿಸಲು ಬಳಸುವ ಅಂಗಗಳನ್ನು ಧ್ವನ್ಯಂಗಗಳು ಎಂದು ಕರೆಯುತ್ತಾರೆ. ನಾವು ಮಾಡುವ ಧ್ವನಿಯಲ್ಲಿ ಶ್ವಾಸಕೋಶ ಗಾಳಿಯನ್ನು ಹೊರಹಾಕುವಾಗ ಮಾಡುವ ಧ್ವನಿಗಳೇ ಹೆಚ್ಚು, ಆದರೆ ಗಾಳಿಯನ್ನು ಸ್ವೀಕರಿಸುವಾಗ ಮಾಡುವ ಧ್ವನಿಯಲ್ಲಿರುವ ಭಾಷೆಗಳು ಇವೆ ಎಂಬುದನ್ನು ತಿಳಿಸುತ್ತಾರೆ. ಆದರೆ ಇವು ಬಹಳ ವಿರಳ. ಚಿತ್ರದ ಮೂಲಕ ಅಕ್ಷರ ಉತ್ಪತ್ತಿಯ ಸ್ಥಾನಗಳನ್ನು ಗುರುತಿಸಿ ವಿವರಣೆಯನ್ನು ಸರಳಗೊಳಿಸಿದ್ದಾರೆ. ನಮ್ಮ ಧ್ವನ್ಯಂಗಗಳನ್ನು ಕೊಳಲಿಗೆ ಹೋಲಿಸಿ ವಿವರಿಸಿರುವದು ಧ್ವನಿಯ ವ್ಯತ್ಯಾಸ ಹೇಗಾಗುತ್ತದೆ ಎಂಬುದನ್ನು ವಿವರಿಸುತ್ತದೆ. ಮನುಷ್ಯನ ಧ್ವನ್ಯಂಗಗಳು ಹೊರಡಿಸಬಹುದಾದ ಧ್ವನಿಗಳ ಸಂಖ್ಯೆಗೆ ಮಿತಿ ಇಲ್ಲ. ಆದರೆ ಆ ಧ್ವನಿಗಳಲ್ಲೆಲ್ಲವನ್ನೂ ಭಾಷೆಗಳು ಬಳಸಿಕೊಂಡಿಲ್ಲ. ಆದರೆ ಒಂದು ಭಾಷೆ ಬಳಸುವ ಧ್ವನಿಗಳನ್ನೇ ಇನ್ನೊಂದು ಭಾಷೆಯೂ ಬಳಸಿಕೊಂಡಿಲ್ಲ ಎಂಬುದು ನಮ್ಮ ಅನುಭವಕ್ಕೆ ಬಂದ ವಿಷಯ. ಧ್ವನಿಗಳ ಉಚ್ಚಾರಣಾ ವಿಧಾನಗಳನ್ನು ಅನುಸರಿಸಿ ಧ್ವನಿ ವ್ಯವಸ್ಥೆಯನ್ನು ಗುರುತಿಸಲಾಗಿದೆ. ಭಾಷಾ ವಿಜ್ಞಾನಿಗೆ ಧ್ವನಿ ವಿಜ್ಞಾನದ ಜ್ಞಾನ ಅತ್ಯಾವಶ್ಯಕ ಎಂಬುದನ್ನು ಈ ಅಧ್ಯಯನವು ನಿರೂಪಿಸುತ್ತದೆ.

ಯಾವುದೇ ಭಾಷೆಯನ್ನಾಗಲಿ ಅದನ್ನು ಎರಡು ದೃಷ್ಟಿಕೋನಗಳಿಂದ ನೋಡಲು ಸಾಧ್ಯ. ಭಾಷೆಯನ್ನು ನಾವು ಬಳಸುತ್ತಿದ್ದೇವೆ, ಪ್ರತಿನಿತ್ಯವೂ ಅದನ್ನು ಕೇಳುತ್ತಿರುತ್ತೇವೆ. ಅದು ಈಗ ಯಾವ ಸ್ವರೂಪದಲ್ಲಿದೆಯೋ ಹಾಗೆಯೇ ಅದನ್ನು ಅಭ್ಯಸಿಸುವುದು, ಅದರ ಸ್ವರೂಪವನ್ನು ವಿವರಿಸುವುದು ಒಂದು ರೀತಿ. ಇದನ್ನು ವಿವರಣಾತ್ಮಕ ಭಾಷೆಯ ವಿಜ್ಞಾನ ಎಂದು ಕರೆಯುತ್ತಾರೆ. ಇದು ಭಾಷೆಯನ್ನು ಒಂದು ಕಾಲ, ದೇಶಕ್ಕೆ ಸೀಮಿತಗೊಳಿಸಿ ಅಲ್ಲಿ ಬಳಕೆಯಲ್ಲಿರುವಂತೆ ಮಾತ್ರ ವಿವರಿಸುತ್ತದೆ. ಒಂದೊಂದು ಧ್ವನಿಗೂ ಪರಸ್ಪರ ವ್ಯತ್ಯಾಸಗಳನ್ನು ಭಾಷೆ ಬೇರೆ ಬೇರೆ ಅರ್ಥಗಳನ್ನು ಸೂಚಿಸಲು ಬಳಸಿಕೊಳ್ಳುತ್ತದೆ. ಒಂದು ಭಾಷೆಯ ವ್ಯಾಕರಣವನ್ನು ಎರಡು ರೀತಿಯಾಗಿ ವಿಭಾಗಿಸಿ ಆಕೃತಿ ವಿಜ್ಞಾನ ಮತ್ತು ವಾಕ್ಯ ವಿಜ್ಞಾನ ಎಂಬುದಾಗಿ ವಿವರಣೆಯೊಂದಿಗೆ ನಿರೂಪಿಸಿದ್ದಾರೆ. ಭಾಷೆಯಲ್ಲಿ ಒಂದೊಂದು ಪ್ರಕೃತಿಯು ಹಲವು ಆಕಾರಗಳನ್ನು ತಾಳಿ ಬೇರೆ ಬೇರೆ ಅರ್ಥ ಛಾಯೆಗಳನ್ನು ತಾಳುತ್ತದೆ. ಇದನ್ನು ಪ್ರಮುಖವಾಗಿ ಐದು ರೀತಿಯಲ್ಲಿ ವಿವರಿಸಿದ್ದಾರೆ ಪ್ರತ್ಯೇಕೀಕರಣ, ಆಂತರಿಕ ವ್ಯತ್ಯಾಸ, ಅಭ್ಯಾಸ, ಭಿನ್ನ ಪದಾಗಮ ಮತ್ತು ಶೂನ್ಯ ಪ್ರತ್ಯಯ ಎಂಬುದಾಗಿ ವಿವರಿಸಿದ್ದಾರೆ. ಭಾಷೆಯ ಒಂದು ಅವಸ್ಥೆಯೊಂದಿಗೆ ಮತ್ತೊಂದು ಅವಸ್ಥೆಯನ್ನು ಹೋಲಿಸಿ ನೋಡುವುದು ಐತಿಹಾಸಿಕ ಭಾಷೆಯ ವಿಜ್ಞಾನವಾಗಿದೆ. ಒಂದು ಕಾಲದಲ್ಲಿ ಪ್ರಚಾರದಲ್ಲಿದ್ದ ಭಾಷೆಯು ಮತ್ತೊಂದು ಕಾಲದಲ್ಲಿ ಪ್ರಚಾರದಲ್ಲಿರುವ ಭಾಷೆಯನ್ನು ಕುರಿತು ಈ ವಿಜ್ಞಾನ ಅಧ್ಯಯನ ನಡೆಸುತ್ತದೆ. ಆದರೆ ಐತಿಹಾಸಿಕ ಭಾಷೆಯ ವಿಜ್ಞಾನದ ಅಂಗವಾಗಿ ನಾವು ತೌಲನಿಕ ಭಾಷೆ ವಿಜ್ಞಾನವನ್ನು ಅಧ್ಯಯನ ಮಾಡುತ್ತೇವೆ. ಪ್ರಸ್ತುತ ತಿಳಿದಿರುವ ಭಾಷೆಗಳನ್ನು

ಪರಸ್ಪರ ಹೋಲಿಸಿ ನೋಡಿದಾಗ ಅವುಗಳಿಗಿರುವ ಸಾದೃಶ್ಯ ಮತ್ತು ವ್ಯತ್ಯಾಸಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಭಾಷಾ ವಿಜ್ಞಾನದ ಇತಿಹಾಸ ಎಂಬ ಅಧ್ಯಯನದಲ್ಲಿ ಭಾಷೆಯ ವಿಜ್ಞಾನದ ಉಗಮದ ಕುರಿತು ವಿವರಿಸಲಾಗಿದೆ. ಭಾಷಾ ವಿಜ್ಞಾನ ಕ್ಷೇತ್ರಕ್ಕೆ ವಿವಿಧ ದೇಶಗಳ ಭಾಷಾ ವಿಜ್ಞಾನಿಗಳು ನೀಡಿರುವ ಕೊಡುಗೆಯನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ, ವಿವರಣಾತ್ಮಕವಾಗಿ ಮಾಹಿತಿಯನ್ನು ನೀಡಲಾಗಿದೆ.

ಉಪಸಂಹಾರ:

ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಅದರಲ್ಲೂ ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಚಿದಾನಂದಮೂರ್ತಿಯವರ 'ಭಾಷಾ ವಿಜ್ಞಾನದ ಮೂಲತತ್ವಗಳು' ಎಂಬ ಕೃತಿಯು ಒಂದು ದಾರಿದೀಪವಾಗಿದೆ. ತೀ.ನಂ.ಶ್ರೀ. ಅವರು ಬರೆಯಬೇಕೆಂದು ಭಾವಿಸಿದ್ದ 'ಕನ್ನಡ ಭಾಷಾ ಚರಿತ್ರೆ' ಎಂಬ ಪುಸ್ತಕವು ಅವರ ಹಸ್ತದಿಂದ ಮೂಡಿ ಬರದಿದ್ದರೂ ಅವರ ಶಿಷ್ಯರಾದ ಚಿದಾನಂದಮೂರ್ತಿ ಅವರ ಮೂಲಕ ಅವರ ಕೆಲವೊಂದು ವಿಚಾರಗಳಾದರೂ ಈ ಪುಸ್ತಕದಲ್ಲಿ ಬಂದಿರುವುದನ್ನು ಗಮನಿಸಬಹುದು. ವಿವಿಧ ಭಾಷೆಗಳಿಂದ ತಿಳಿದಂತಹ ವಿಚಾರಗಳನ್ನು, ಲೇಖನಗಳನ್ನು ಒಂದೆಡೆ ಸಂಗ್ರಹಿಸಿರುವ ಕಾರ್ಯ ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಒಂದು ದಾರಿ ದೀಪವೆಂದು ಈ ಪುಸ್ತಕವನ್ನು ಪರಿಭಾವಿಸಬಹುದು. ಮುಂದೆ ಭಾಷಾ ವಿಜ್ಞಾನ ಬರೆದಂತಹ ವಿದ್ವಾಂಸರಿಗೆ ಇದೊಂದು ಕೈಗನ್ನಡಿಯಾಗಿದೆ.

ಪರಾಮರ್ಶನ ಗ್ರಂಥಗಳು:

1. ಚಿದಾನಂದಮೂರ್ತಿ ಎಂ., (2021), ಭಾಷಾ ವಿಜ್ಞಾನದ ಮೂಲತತ್ವಗಳು, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.
2. ಮರುಳಯ್ಯ ಸ.ಶಿ., (1992), ಕನ್ನಡ ಭಾಷಾ ಚರಿತ್ರೆ, ಬೆಂಗಳೂರು: ರಾಗಿಣಿ ಶಿಕ್ಷಣ ಪ್ರತಿಷ್ಠಾನ.
3. ಕೃಷ್ಣಯ್ಯ ಎಂ.ಎಚ್., (2021), ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಬೆಂಗಳೂರು: ಅಂಕಿತ ಪುಸ್ತಕ.
4. ನಾಗಭೂಷಣ ತೀ.ಶ್ರೀ., (2006), ತೀ.ನಂ.ಶ್ರೀ ಪಥ–ಪರಿಸರ, ಬೆಂಗಳೂರು: ಇಳಾ ಮುದ್ರಣ.